
# ಜೋಕುಮಾರಸ್ವಾಮಿ ಬಂದ..

ಗಣಪತಿ ಹಬ್ಬದ ನಂತರ ಉತ್ತರ ಕರ್ನಾಟಕದಲ್ಲಿ ಜೋಕುಮಾರಸ್ವಾಮಿ ಬರುತ್ತಾನೆ. ಜೋಕುಮಾರ ಮಳೆ ತರುತ್ತಾನೆಂಬ ನಂಬಿಕೆ ಇದೆ. ಜೋಕುಮಾರನನ್ನು ಹೊತ್ತು ತರುವ ಮಹಿಳೆಯರು ಅವನ ಲೀಲೆಗಳನ್ನು ಕುರಿತು ಹಾಡು ಹಾಡುತ್ತಾರೆ. ಮನೆಮನೆಗೆ ತೆರಳಿ ಅವನಿಗಾಗಿ ಬಟ್ಟೆ– ಬರೆ, ದುಡ್ಡು, ಜೋಳ, ಅಕ್ಕಿ ಸಂಪಾದಿಸುತ್ತಾರೆ. ಇದು ಸುರಪುರದಲ್ಲಿ ಜೋಕುಮಾರನ ಆಗಮನದ ವೈಖರಿ.

**-ಶ್ರೀನಿವಾಸ ಜಾಲವಾದಿ, ಯಾದಗಿರಿ**







# ದೇವರ ಕುದುರೆ

ಇದು ದೇವರ ಕುದುರೆ ದಾವಲ್ ಮಲಿಕ್ ಸಂತರ ಕುದುರೆ. ಈ ಕುದುರೆಗೆ ಭಕ್ತರು ಧೂಪ, ಹೂಗಳನ್ನು ಸಮರ್ಪಿಸಿ ನಮಸ್ಕರಿಸುತ್ತಾರೆ. ಅಂದಾಜು 150 ವರ್ಷಗಳ ಇತಿಹಾಸವಿರುವ ಈ ಕುದುರೆಯನ್ನು ದಾವಲ್ ಮಲಿಕ್ ಯಂಕಂಚಿ ಉರುಸ್‌ನಲ್ಲಿ ವೈಭವದಿಂದ ಪೂಜಿಸುತ್ತಾರೆ. ಜಾತ್ರೆ ಹಿಂದಿನ ದಿನ ಗಂಧದ ಅಭಿಷೇಕ ಮಾಡುತ್ತಾರೆ. ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನಿಂದ ಅನತಿ ದೂರದಲ್ಲಿರುವ ಯಂಕಂಚಿ ಗ್ರಾಮದ ದಾವಲ್ ಮಲಿಕ್ ದೇವಸ್ಥಾನವು ಹಿಂದೂ ಮುಸ್ಲಿಂ ಭಾವೈಕ್ಯತೆಯ ಭಕ್ತಿ ತಾಣ.

**ಚಿತ್ರ- ಬರಹ: ಚಿತ್ರಲೇಖಾ ಜೋಗುರ, ವಿಜಯಪುರ**

# ಕೆಳದಿಯ ಚೆನ್ನಮ್ಮಾಜಿಯ ಸ್ಮಾರಕ

ಶೌರ್ಯಕ್ಕೆ ಹೆಸರಾದ ಕೆಳದಿಯ ರಾಣಿ ಚೆನ್ನಮ್ಮ ಕೋಟಿಪುರದ ಸಿದ್ದಪ್ಪ ಶೆಟ್ಟರ ಮಗಳು. ಸೋಮಶೇಖರ ನಾಯಕನ ಹೆಂಡತಿ, ಶಿವಪ್ಪ ನಾಯಕನ ಸೊಸೆ. ತನ್ನ ಗಂಡನ ಕೊಲೆಯಾಗಿ ರಾಜ್ಯವು ದುಃಸ್ಥಿತಿಗೆ ಬಂದಾಗ ಧೈರ್ಯದಿಂದ ಆಡಳಿತ ವಹಿಸಿಕೊಂಡು ರಾಜ್ಯಭಾರ ಮಾಡಿದಳು. ಸೋದೆ, ಬನವಾಸಿ, ಶಿರಸಿ, ಬಸವಾಪಟ್ಟಣ ಮೊದಲಾದ ರಾಜರನ್ನು ಹಿಮ್ಮೆಟ್ಟಿಸಿದಳು. ಶೃಂಗೇರಿ, ಕಿಗ್ಗ ಮೊದಲಾದ ಮಠದ ದೇವಾಲಯಗಳಿಗೆ ದಾನ ನೀಡಿ ಭಾರತೀಯ ಇತಿಹಾಸದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದಾಳೆ.

ಕತ್ತಿ ಹಿರಿದು ಕುದುರೆಯ ಮೇಲೆ ಕುಳಿತ ಈ ವೀರ ಮಹಿಳೆಯ ಸುಂದರ ಪುತ್ಥಳಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕೆಳದಿಯಲ್ಲಿರುವ ಚೆನ್ನಮ್ಮಾಜಿ ಉದ್ಯಾನವನದಲ್ಲಿದೆ. ಆಕೆಯ ಕುರಿತ ಮಾಹಿತಿಯನ್ನೂ ಅಲ್ಲಿ ಬರೆದಿಡಲಾಗಿದೆ.

**-ಎಂ.ಎನ್.ಜೋಶಿ, ಮೈಸೂರು**

